ಪಾಲಿಸುತ್ತಿರುವ ಹಾಸನ ಪ್ರಾಂತ್ಯದ ಮಂದಿಗೆ ಎರಗುವೆನು.

ಚರಿತ್ರೆಯಲ್ಲಿ ಹೆಣ್ಣು–ಹೊನ್ನು–ಮಣ್ಣಿಗಾಗಿ ಸಮರಗಳಾಗಿವೆ. ಆದರೆ, ನಮ್ಮೂರಿನಲ್ಲಿ ನಡೆದಿರುವ ಭಾಗಶಃ ಕಲಹಗಳು ಬಾಡಿನ ವಿಷಯಕ್ಕೆಂದರೆ ನೀವು ನಂಬಲೆಬೇಕು. ಸಾಕಿದ ಕುರಿಯನ್ನು ಕದ್ದು ಕೊಯ್ಯುವ ತಾರುಣ್ಯದ ಗೆಳೆಯರು, ಕಾಳು ಹೆಕ್ಕಲು ಹಾರಿಹೋದ ಕೋಳಿಯನ್ನು ಸರ್ರನೆಳೆದು ಕೊಯ್ಯುವ ಕೋಳಿಖದೀಮರ ಜೊತೆ ಸಾಕವ್ವನಂತಹವರು ಇನ್ನೂ ಜಗಳ ಕಾಯುವುದುಂಟು. ನಮ್ಮ ಊರಿನಲ್ಲಿ ಒಬ್ಬ ರೈತ ತನ್ನ ಮನೆಯಲ್ಲಿಯೇ ಹುಟ್ಟಿದ್ದ ಎಳೆಗರುವನ್ನು ಎತ್ತನ್ನಾಗಿ ದೊಡ್ಡದು ಮಾಡಿ, ಅದರಲ್ಲಿಯೇ ದುಡಿದುಂಡು, ವಯಸ್ಸಾದ ಮೇಲೆ ಅದು ತೀರಿ ಹೋಯಿತಂತೆ. ಅದನ್ನು ತಿನ್ನುವ ಸಮುದಾಯವೊಂದು ಕೊಯ್ಯಲು ಬಂದಾಗ ಬೇಡವೆಂದು ವಾಪಸು ಕಳಿಸಿದನಂತೆ. ಮಾಂಸದ ಮೇಲಿನ ಆಸೆಯಿಂದ ಇವ ಮನೆಗೆ ಹೋಗುವವರೆಗೆ ಅವರು ಹೊಂಚುಹಾಕಿ ಮತ್ತೆ ಬಂದು ಕುಯ್ಯಲು ಆರಂಭಿಸಿದರಂತೆ. ಸಾಕಿದ ಧಣಿ, ಮೊದಲೇ ಅದರ ಸಾವಿನಿಂದ ದುಃಖಿತನಾಗಿದ್ದ, ಅವನ ದೇವರ ಹೆಣವ ಕತ್ತರಿಸುವುದನ್ನು ನೋಡಿ ತಡೆಯಲಾಗದ ಕೋಪದಿಂದ ಮನಸೋ ಇಚ್ಛೆ ಅವರಿಗೆ ಬಡಿದೇ ಬಡಿದು ಥಳಿಸಿದನಂತೆ. ಬಡಿಸಿಕೊಂಡವರು ಯಾವುದೋ ವಾಮಚಾರ ಮಾಡಿದ್ದರಿಂದ ಅಲ್ಲಿ ವ್ಯವಸಾಯ ಮಾಡಿದವರೆಲ್ಲ ಸಾಯುತ್ತಾರಂತೆ. ಚಿನ್ನದಂತಹ ಆ ಭೂಮಿ ಈಗಲೂ ಹಾಳು ಬಿದ್ದು ಸಂಡಾಸಿಗೆ ಸೀಮಿತವಾಗಿರುವುದುಂಟು. ಅಂತೂ ಹೆಣ್ಣು–ಹೊನ್ನು–ಮಣ್ಣಿಂಗಲ್ಲದೆ ಬಾಡಿಂಗೂ ಜನ ಸತ್ತ ಕಥೆಯೊಂದು ಚಾಲ್ತಿಯಲ್ಲಿದೆ.

ಕುವೆಂಪು ವಿಶ್ವವಿದ್ಯಾಲಯದ ಶಂಕರಘಟ್ಟದಲ್ಲಿ ವಾಸ ಮಾಡುವ ಪ್ರಸಂಗ ಬಂದೊದಗಿತು. ತೋಟದೊಳಗಿದ್ದ ಒಂಟಿಮನೆಯನ್ನು ಗೆಳೆಯರೆಲ್ಲ ಕೂಡಿ ಬಾಡಿಗೆ ಪಡೆದು ವಾಸಿಸುತ್ತಿದ್ದರು. ನಾನೂ ಹೋಗಿ ಅವರ ಜೋಡಿ ಸೇರಿದೆ. ಅದು ಕ್ರಮೇಣ 'ತೋಟದ ಮನೆ' ಎಂದು ಅನ್ವರ್ಥವಾಗಿ, 'ಬಾಡಿನ ಮನೆ' ಎಂಬ ವಿಶೇಷಣವನ್ನೂ ಪಡೆಯಿತು. ಅಲ್ಲಿ ಇದ್ದ ಪಾತ್ರೆಗಳು ತರಕಾರಿಗಳನ್ನು ಪೋಷಿಸಿದ್ದಕ್ಕಿಂತಲೂ ಮಾಂಸದ ತುಂಡುಗಳನ್ನು ತಮ್ಮ ಒಡಲಲ್ಲಿ ಇಟ್ಟುಕೊಂಡದ್ದೇ ಹೆಚ್ಚು. ಮೊಟ್ಟೆ ಕೋಳಿಯನ್ನು ಕತ್ತರಿಸಿಕೊಂಡು ಹೋದ ಒಂದು ಗಂಟೆಯಲ್ಲೇ ಮಿತ್ರ ಮೋಹನನ ಕೈಯಲ್ಲಿ ಮಾಂಸದ ಹೂವುಗಳು ಅರಳುತ್ತಿದ್ದವು. ಕೈರುಚಿಯ ಬಗ್ಗೆ ಜನರು ಹಾಡಿಕೊಳ್ಳುವುದನ್ನು ಕೇಳಿರಬಹುದು. ಈ ಸಾಂಪ್ರದಾಯಿಕ ಮಾತನ್ನು ನಂಬುವುದಾದರೆ ಮೋಹನನ ಕೈರುಚಿ ಅಕ್ಷರಶಃ ನಳಪಾಕ. ಕೋಳಿಸಾರನ್ನು ಅರಿಶಿನದ ಬಣ್ಣಕ್ಕೆ ತಿರುಗಿಸಿ, ದೊಡ್ಡ ಗಾತ್ರದ ಈರುಳ್ಳಿಯನ್ನು ಎತ್ತಿನ ಬಂಡಿಯಂತೆ ವೃತ್ತಾಕಾರಕ್ಕೆ ಹೋಳು ಮಾಡಿ, ತೋಟದಲ್ಲಿದ್ದ ಕಾಡು ನಿಂಬೆಹಣ್ಣನ್ನು ಹೆರಕಿ ತಂದು, ಸಾರಿನ ಮೇಲೆಲ್ಲ ಪ್ರೋಕ್ಷಣೆ ಮಾಡಿ, ಮಲ್ಲಿಗೆಯ ಮೊಗ್ಗಿನಂತಹ ಅನ್ನದ ಮೇಲೆ ದಪ್ಪ ಗಾತ್ರದ ತುಂಡುಗಳ ಸಮೇತ ಸಾರು ಸುರಿಯುತ್ತಿದ್ದ. 'ಎಲ್ಲರೂ ಮಾಡುವುದು ಹೊಟ್ಟೆಗಾಗಿ' ಎನ್ನುವ ದಾಸವಾಣಿ ಆಗ ತಾತ್ವಿಕವಾಗಿ ಅರ್ಥ ಸ್ಫುರಿಸುತ್ತಿತ್ತು.

ಭಿನ್ನ ಬಗೆಯ ಬಾಡಿನಲ್ಲಿ ಕೆಂಬಾಡು ಕುರಿಯದ್ದು. ತಲೆಕಾಲು ಸಾರಿನ ಸೂಪನ್ನು ಹೀರುತ್ತ, ಮೆದುಮಾಂಸದ ಪಲ್ಯವನ್ನು ಮೆಲ್ಲುತ್ತ ಮುದ್ದೆಯ ಒಂದೊಂದೇ ಗುಕ್ಕನ್ನು ಮುರಿಯುತ್ತಿದ್ದರೆ ಮಂಡೆಗಾತ್ರದ ಮುದ್ದೆ ಖಾಲಿಯಾದುದೇ ಗೊತ್ತಾಗುವುದಿಲ್ಲ. ಕೊನೆಗೆ ತಟ್ಟೆಯಲ್ಲಿರುವ ನಲ್ಲಿಮೂಳೆಗಳ ಜತೆಗಿನ ಸಾಂಗತ್ಯವನ್ನು ಎದುರುಗೊಳ್ಳುವ ಪರಿ ಅನನ್ಯವಾದುದು. ನಲ್ಲಿಮೂಳೆಯೊಳಗಿನ ಪಘು ಎಷ್ಟು ಕೊಡವಿದರೂ ಬರುವುದಿಲ್ಲ. ಪಾತ್ರೆಗಳನ್ನೂ ಪ್ರೀತಿಸುವ ಪದ್ಮ ನನಗೆ ಮಾಂಸದೂಟ ಬಡಿಸುವಾಗ ಹಳೆಯ ತಟ್ಟೆಯನ್ನೇ ಹುಡುಕಿ ಬಡಿಸುತ್ತಾಳೆ. ಇದುಕಾರಣ, ಈ ನಲ್ಲಿಮೂಳೆಗಳ ಮೇಲೆ ಕಾಳಗ ಹೂಡಿ ಮೂಳೆಯನ್ನು ತಟ್ಟೆಗೆ ಕುಟ್ಟಿ ಕುಟ್ಟಿ ಎಷ್ಟೋ ತಟ್ಟೆಗಳು ದಾಸಯ್ಯನ ದಮ್ಮಡಿಯಂತೆ ತೂತು ಬಿದ್ದು, ಜೋಳದ ಹೊಲ ಸೇರಿ ಗಾಳಿಗೆ ಬಡಿದುಕೊಳ್ಳುತ್ತಿವೆಯಂತೆ. ಅದು ಇಷ್ಟಾಗಿಯೂ ಬರದಿದ್ದರೆ ರಣರಂಗದಲ್ಲಿ ಅಡಗಿಕುಳಿತ ಶತ್ರುವನ್ನು ಅಜಮಾಯಿಶಿ ಮಾಡಿ ಹೊರಗೆಳೆವಂತೆ ತಡಕಿ ತಡಕಿ, ಕೊನೆಗೆ ನಾಲಗೆಯ ಮೇಲೆ ಬಂದು ಬೀಳುವಂತೆ ಮಾಡುತ್ತೇನೆ. ಬಹುಶಃ ಮಾಂಸದ